## ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಬಸವಕಲ್ಯಾಣ

## ಸಿ.ಸಿ. ನಂ. 7279/2023

ಫಿರ್ಯಾದಿ : ವ್ಯವಸ್ಥಾಪಕರು, ಸಮೃದ್ಧಿ ಮಲ್ಟಿ ಸ್ಟೇಟ್ ಕೋ-ಆಪರೇಟಿವ ಸೊಸೈಟಿ, ಲಿಮಿಟೆಡ್, ಬ್ರ್ಯಾಂಚ್ ಮುಡಬಿ. ತಾ.ಬಸವಕಲ್ಯಾಣ.

ವಿರುದ್ಧ

ಆರೋಪಿ : ವಿಜಯಕುಮಾರ ತಂದೆ ನಾಗಣ್ಣ ಸಜ್ಜನಶೆಟ್ಟಿ

ಕಾಯ್ದೆ ಕಲಂ : ಕಲಂ 138, 142 ಎನ್.ಐ. ಕಾಯಿದೆ.

## ದೋಷಾರೋಪಣೆ

ನಾನು ಶ್ರೀ.ಭರತ ಯೋಗೇಶ ಕರಗುದರಿ, ಸಿವಿಲ್ ನ್ಯಾಯಾಧೀಶ ಮತ್ತು ಪ್ರಥಮ ವರ್ಗದ ನ್ಯಾಯಿಕ ದಂಡಾಧಿಕಾರಿ ಬಸವಕಲ್ಯಾಣ ನ್ಯಾಯಾಲಯ, ಈ ಕೆಳಕಂಡ ನಿಮ್ಮನ್ನು :-

ವಿಜಯಕುಮಾರ ತಂದೆ ನಾಗಣ್ಣ ಸಜ್ಜನಶೆಟ್ಟಿ ವಯಸ್ಸು:45, ಉ.ವ್ಯವಹಾರ, ಸಾ||ಮಂಠಾಳ, ಸಾ.ಬಸವಕಲ್ಯಾಣ.

ಈ ಕೆಳಕಂಡ ಆರೋಪಕ್ಕೆ ಗುರಿಪಡಿಸುತ್ತೇನೆ.

ಆರೋಪಿಯಾದ ನೀನು ದೂರದಾರರಿಂದ ರೂ.45,000/- ಸಾಲವನ್ನು ಮಾಡಿದ್ದು ಅದನ್ನು ಹಿಂದಿರುಗಿಸುವಾಗ ದೂರುದಾರರ ಹೆಸರಿನಲ್ಲಿ ಎಕ್ಸಿಸ್ ಬ್ಯಾಂಕಿನ ಬ್ರ್ಯಾಂಚ್ ತ್ರಿಪೂರಾಂತರ, ಬಸವಕಲ್ಯಾಣ ಬ್ಯಾಂಕಿನ ನಿಮ್ಮ ಖಾತೆಯ ರೂ.76,263/- ಮೊತ್ತದ ಚೆಕ್ಕ ನಂ.019002, ದಿ.15.02.2023 ರಂದು ನೀಡಿದ್ದು, ಅದನ್ನು ನಗದಿಕರಿಸಲು ದೂರುದಾರರು ಮುಂದಾದಾಗ ಬ್ಯಾಂಕಿನವರು ನಿಮ್ಮ ಖಾತೆಯನ್ನು ಮುಕ್ತಾಯಗೊಳಿಸಲಾಗಿದೆ ಎಂದು ತಿಳಿಸಿ ಚೆಕ್ಕನ್ನು ಮರಳಿ ನೀಡಿರುತ್ತಾರೆ. ಅದಾದನಂತರ ವಿಚಾರವನ್ನು ತಮಗೆ ತಿಳಿಸಿ ಚೆಕ್ಕಿನ ಹಣವನ್ನು ನೀಡಬೇಕೇಂದು ವಿನಂತಿಸಿಕೊಂಡರು ಹಣ ಮರು ಪಾವತಿ ಮಾಡಿರುವುದಿಲ್ಲ ಮತ್ತು ತಮ್ಮ ಪುರಸ್ಕೃತವಾಗಿರುವುದಿಲ್ಲ ಹೀಗಾಗಿ ನೀವು ಈ ನ್ಯಾಯಾಲಯದ ಅರಿವಿನೊಳಗೆ N.I. Act ಕಾಯಿದೆಯ ಸೆಕ್ಷನ್ 138 ಮತ್ತು 142 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದೀರಿ ಎಂದು ಆರೋಪಿಸಲಾಗಿರುತ್ತದೆ .

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಸ್ಥಳ: ಬಸವಕಲಾಣ. ಸಿವಿಲ್ ನ್ಯಾಯಾಧೀಶರು
ದಿನಾಂಕ: 20.12.2023. ಮತ್ತು ಜೆ.ಎಂ.ಎಫ್.ಸಿ., ಬಸವಕಲ್ಯಾಣ.

## ಆರೋಪಿ ಹೇಳಿಕೆ

ಪ್ರಶ್ನೆ: 1. ಸದರಿ ಆರೋಪಣೆಯನ್ನು ಓದಿ ಹೇಳಿದ್ದು ನಿಮಗೆ ತಿಳಿಯಿತೇ?
ಉತ್ತರ :-

ಪ್ರಶ್ನೆ:2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರ :-

(ಮೇಲಿನ ಆರೋಪಣೆಯನ್ನು ಆರೋಪಿಗಳಿಗೆ ಕನ್ನಡದಲ್ಲಿ ಓದಿ ಹೇಳಿ ಪ್ರಶ್ನೆ ಕೇಳಿ, ಕೊಟ್ಟ ಉತ್ತರಗಳನ್ನು ಬರೆದುಕೊಂಡಿರುವುದು ಸರಿ ಇದೆ ಎಂದು ದೃಢೀಕರಿಸಲಾಗಿದೆ)

ಸ್ಥಳ: ಬಸವಕಲಾಣ. ಸಿವಿಲ್ ನ್ಯಾಯಾಧೀಶರು
ದಿನಾಂಕ: 20.12.2023. ಮತ್ತು ಜೆ.ಎಂ.ಎಫ್.ಸಿ., ಬಸವಕಲ್ಯಾಣ.